**ಸಿ.ಸಿ.ನಂ. 323/2025**

**ಡಿ.ಡಬ್ಲ್ಯೂ-1**

ದಿನಾಂಕ: 06-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ- ದೂರುದಾರ ಪರ ಶ್ರೀ.ಎಸ್.ಬಿ.ಹೆಚ್ ವಕೀಲರಿಂದ ಃ**

1. ಫಿರ್ಯಾದಿದಾರ ನನಗೆ 2015 ರಿಂದ ಪರಿಚಯ. 11-12-2020 ರಂದು ಫಿರ್ಯಾದಿದಾರ ನನಗೆ ಲೀಗಲ ನೋಟಿಸ ಏಕೆ ನೀಡಿದ್ದರು ಗೊತ್ತಿಲ್ಲ. ಸದರಿ ನೋಟಿಸ ನಾನು ಪಡೆದಿದ್ದು ಅದರ ರಸೀದಿ ಹಾಜರಪಡಿಸಿದ್ದ ಬಗ್ಗೆ ನನಗೆ ಮಾಹಿತಿ ಇದೆ. 02-12-2020 ರಂದು ನಾನು ಪ್ರಾಪಂಚಿಕ ಅಡಚಣೆ ಗೊಸ್ಕರ ದೂರುದಾರರಿಂದ 11 ಲಕ್ಷ ರೂಪಾಯಿ ಪಡೆದಿದ್ದೇನೆ ಎಂದರೆ ಸರಿಯಲ್ಲ. ಆಗ ನಾನು ವಿಜಯಾ ಬ್ಯಾಂಕನ ಚೆಕ್ಕ ನಂ.095406 ರಲ್ಲಿ 11 ಲಕ್ಷ ರೂಪಾಯಿ ನಮೂದಿಸಿ ಫಿರ್ಯಾದಿದಾರರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಷಯ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ 03-02-2016 ರಂದು ನನ್ನ ಪ್ಲಾಟ ಸರ್ವೆ ನಂ.499 ಕೆ ಪ್ಲಾಟ ನಂ.35 ನ್ನು ಖರೀದಿ ನೋಂದಮಾಡಿ ಕೊಟ್ಟಿದ್ದು ಅವರಿಂದ ರೂ.6,50,000/- ಹಣ ಪಡೆದು 06-02-2018 ರಂದು ಸದರಿ ಹಣವನ್ನು ಮರುಪಾವತಿಸಿ ಸದರಿ ಖರೀದಿ ನೋಂದ ರದ್ದತಿ ಮಾಡಿಕೊಂಡೆನು. ಖರೀದಿ ಮಾಡುವ ವೇಳೆಯಲ್ಲಿ ನಾನು ಫಿರ್ಯಾದಿಗೆ ಚೆಕ್ಕು ಕೊಟ್ಟೆನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ರದ್ದತಿ ನಂತರ ನನಗೆ ಮತ್ತು ಫಿರ್ಯಾದಿಗೆ ಯಾವುದೇ ವ್ಯವಹಾರಗಳು ಆಗಿಲ್ಲ ಎಂದರೆ ಸರಿ.

2. ನಾನು 20 ವರ್ಷಗಳಿಂದ electrical ಗುತ್ತಿಗೆದಾರ ಕೆಲಸ ಮಾಡುತ್ತೇನೆ. ನಾನು 2013 ರಲ್ಲಿ ಫಿರ್ಯಾದಿ ಜೊತೆ ಹಣಕಾಸಿನ ವ್ಯವಹಾರ ಮಾಡಿ ದಾಖಲೆಗಳನ್ನು ಬರೆದು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ದಿಃ 28-06-2013 ರಂದು ನಾನು ಫಿರ್ಯಾದಿಗೆ ಒಂದು ಬಾಂಡ ಬರೆದುಕೊಟ್ಟಿದ್ದೆ ಎಂದರೆ ಸರಿ. ಆಗ ಫಿರ್ಯಾದಿಯಿಂದ 3 ಲಕ್ಷ ಕೈಗಡ ಸಾಲ ಪಡೆದು ಬಾಂಡ ಬರೆದುಕೊಟ್ಟಿದ್ದೆ ಎಂದರೆ ಸರಿ. ಸದರಿ ಕೈಗಡ ಸಾಲ ಫಿರ್ಯಾದಿಗೆ ಮರುಪಾವತಿಸಿ ಬಾಂಡನ ಮೂಲ ಪ್ರತಿ ನಾನು ಪಡೆದು ಅದರ ಝೇರಾಕ್ಸ ಪ್ರತಿ ಫಿರ್ಯಾದಿಗೆ ನೀಡಿದೆನು ಎಂದರೆ ಸರಿ. ಆಗ ನನ್ನ ಎಲ್ಲಾ ದಾಖಲೆಗಳನ್ನು ಫಿರ್ಯಾದಿ ವಾಪಸ್ಸು ನನಗೆ

ಕೊಟ್ಟರು ಎಂದರೆ ಸರಿಯಲ್ಲ. ನಿಪಿ-1 ನನ್ನ ಮತ್ತು ಫಿರ್ಯಾದಿ ನಡುವೆ 11 ಲಕ್ಷ ರೂಪಾಯಿ ವ್ಯವಹಾರಕ್ಕೆ ಸಂಬಂಧಪಟ್ಟದ್ದು ಇದೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕು ಮತ್ತು ಖರೀದಿ ರದ್ದತಿಪತ್ರ ಒಂದಕ್ಕೊಂದು ಸಂಬಂಧ ಇಲ್ಲಾ ಎಂದರೆ ಸರಿಯಲ್ಲ. ನಿಪಿ-1 ವಿಜಯಾ ಬ್ಯಾಂಕನ ಚೆಕ್ಕು ಎಂದರೆ ಸರಿ. ವಿಜಯಾ ಬ್ಯಾಂಕ ಬ್ಯಾಂಕ ಆಫ್ ಬರೋಡಾ ಜೊತೆ ಕೂಡಿಕೊಂಡಿದೆ ಎಂದರೆ ಸರಿ.

3. ಮುಧೋಳ ನ್ಯಾಯಾಲಯದಲ್ಲಿ ನನ್ನ ವಿರುದ್ದ ರಾಮಣ್ಣ ಕಲ್ಲಪ್ಪ ಸೌದಿರವರು ಸಿಸಿ ನಂ.530/2021 ದಾಖಲಿಸಿದ್ದರು ಎಂದರೆ ಸರಿ. ಸದರಿ ರಾಮಣ್ಣರವರಿಗೆ ದಿಃ 20-10-2020 ರಂದು ವಿಜಯ ಬ್ಯಾಂಕ ಚೆಕ್ಕು ಕೊಟ್ಟಿದ್ದೇನೆ ಎಂದರೆ ಸರಿ. ಸಿ.ಸಿ ನಂ.530/2021 ರಲ್ಲಿ ನನಗೆ ಶಿಕ್ಷೆಯಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೆನೆಂದರೆ ಸದರಿ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿದ್ದೇನೆ ಎನ್ನುತ್ತಾರೆ. ಅಲ್ಲದೇ ನನ್ನ ವಿರುದ್ದ ರಾಮಣ್ಣ ಕಲ್ಲಪ್ಪ ಸೌದಿರವರು ಸಿಸಿ ನಂ.531/2021 ದಾಖಲಿಸಿದ್ದರು ಎಂದರೆ ಸರಿ. ಸದರಿ ರಾಮಣ್ಣರವರಿಗೆ ದಿಃ 15-10-2020 ರಂದು ವಿಜಯ ಬ್ಯಾಂಕ ಚೆಕ್ಕು ಕೊಟ್ಟಿದ್ದೇನೆ ಎಂದರೆ ಸರಿ. ಸಿ.ಸಿ ನಂ.531/2021 ರಲ್ಲಿ ನನಗೆ ಶಿಕ್ಷೆಯಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೆನೆಂದರೆ ಸದರಿ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿದ್ದೇನೆ ಎನ್ನುತ್ತಾರೆ.

4. ಅಲ್ಲದೇ ನನ್ನ ವಿರುದ್ದ ಶಂಕರ ರಾಮಚಂದ್ರ ಕದಮ ರವರು ಸಿಸಿ ನಂ.714/2021 ದಾಖಲಿಸಿದ್ದರು ಎಂದರೆ ಸರಿ. ಸದರಿ ಶಂಕರವರಿಗೆ ದಿಃ 13-09-2021 ರಂದು ವಿಜಯ ಬ್ಯಾಂಕ ಚೆಕ್ಕು ಕೊಟ್ಟಿದ್ದೇನೆ ಎಂದರೆ ಸರಿ. ಸಿ.ಸಿ ನಂ.714/2021 ರಲ್ಲಿ ನನಗೆ ಶಿಕ್ಷೆಯಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೆನೆಂದರೆ ಸದರಿ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿದ್ದೇನೆ ಎನ್ನುತ್ತಾರೆ.

5. ಅಲ್ಲದೇ ನನ್ನ ವಿರುದ್ದ ಶಂಕರ ರಾಮಚಂದ್ರ ಕದಮ ರವರು ಸಿಸಿ ನಂ.29/2022 ದಾಖಲಿಸಿದ್ದರು ಎಂದರೆ ಸರಿ. ಸದರಿ ಶಂಕರವರಿಗೆ ದಿಃ 13-09-2021 ರಂದು ವಿಜಯ ಬ್ಯಾಂಕ ಚೆಕ್ಕು ಕೊಟ್ಟಿದ್ದೇನೆ ಎಂದರೆ ಸರಿ. ಸಿ.ಸಿ ನಂ.29/2022 ರಲ್ಲಿ ನನಗೆ ಶಿಕ್ಷೆಯಾಗಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಹೇಳುವುದೆನೆಂದರೆ ಸದರಿ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿದ್ದೇನೆ ಎನ್ನುತ್ತಾರೆ.

6. ಜಮಖಂಡಿಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಗೊರ್ಪಡೆರವರು ನನ್ನ ವಿರುದ್ದ ಚೆಕ್ಕ ಬೌನ್ಸ ಕೇಸು ದಾಖಲಿಸಿದ್ದು ಅದು ಚಾಲ್ತಿಯಲ್ಲಿದೆ ಎಂದರೆ ಸರಿ. ನಾನು ಫಿರ್ಯಾದಿಯ 11 ಲಕ್ಷ ರೂಪಾಯಿ ಲಪಟಾಯಿಸುವ ಉದ್ದೇಶದಿಂದ ಚೆಕ್ಕ ನೀಡಿ ಈಗ ಇಲ್ಲಾ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಮಾಹಾಲಕ್ಷ್ಮಿ ಬ್ಯಾಂಕನಲ್ಲಿ ಸಾಲ ಮಾಡಿ ನನ್ನ ತಮ್ಮನ ಕಡೆಯಿಂದ ಪಾಲು ವಾಟ್ನಿಗಾಗಿ ನನ್ನ ವಿರುದ್ದ ಅಸಲು ದಾವೆ ಸಂಖ್ಯೆ 15/2026 ನ್ನು ದಾಖಲಿಸುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ. ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ಜಮಖಂಡಿ